ವಿಷಯ : ಹೊಸದುರ್ಗ ತಾಲ್ಲೂಕಿನಲ್ಲಿರುವ ಮ್ಯಾಂಗನೀಸ್ ಗಣಿಗಳು.

1410 (1960)-ಶ್ರೀ ಟಿ. ಹೆಚ್. ಬಸವರಾಜ್ (ಹೊಸದುರ್ಗ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಎಷ್ಟು ಮ್ಯಾಗನೀಸ್ ಗಣಿಗಳು ಇವೆ.

ಆ) ಗಣಿಗಾರಿಕೆಯ ಪ್ರದೇಶವೆಷ್ಟು ಮೈನ್ಸ್ ಮತ್ತು ಅದರ ರಹದಾರಿಪಡೆದವರ ಸಂಖ್ಯೆ ಎಷ್ಟು?

ಇ) ಮೈನ್ಸ್ ಸಾಗಾಣಿಕೆಯಿಂದ ಹಾಳಾಗುವ ರಸ್ತೆಗಳಿಗೆ ಅನುಧಾನ ಕೊಡುವ ಅವಕಾಶವಿದೆಯೇ? ಹಾಗಾದರೆ ಅದರ ಪ್ರಮಾಣವೆಷ್ಟು? (ಓರ್ ಕ್ಯಾರಿಂಗ್ ರಸ್ತೆಗಳ ಬಗ್ಗೆ)

ಶ್ರೀ ಎಸ್. ಡಿ. ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು.)

ಅ) ಹೊಸದುರ್ಗ ತಾಲ್ಲುಕಿನಲ್ಲಿ ಒಟ್ಟು 12 ಮ್ಯಾಗನೀಸ್ ಗಣಿಗಳಿವೆ.

ಆ) ಗಣಿಗಾರಿಕೆಗೆ ನೀಡಿರುವ ಪ್ರದೇಶ - 899.66 ಹೆಕ್ಟರ್‌ಗಳಾಗಿವೆ. ಅದರ ರಹದಾರಿ ಪಡೆದವರ ಸಂಖ್ಯೆ 12 ಆಗಿರುತ್ತದೆ.

ಇ) ಖನಿಜ ರಿಯಾಯಿತಿ ನಿಯಮಾವಳಿಗಳ 1960 ರಲ್ಲಾಗಲೀ ಅಥವಾ ಗುತ್ತಿಗೆ ಕರಾರಿನಲ್ಲಾಗಲೀ ಅನುದಾನ ನೀಡಲು ಅವಕಾಶವಿಲ್ಲ. ಈ ಪ್ರಶ್ನೆ ಉದ್ಭವಿಸುವುದಿಲ್ಲ.